ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್.ಆರ್. ಬೊಮ್ಮಾಯಿ.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಸಂಬಂಧಪಟ್ಟ ಎಲ್ಲಾ ಉತ್ತರಗಳನ್ನು ಸಭೆಯ ಮುಂದಿಡಬಯಸುತ್ತೇನೆ.

ಅಧ್ಯಕ್ಷರು.—ಉತ್ತರಗಳನ್ನು ಸಭೆಯ ಮುಂದಿಡಲಾಗಿದೆ.

ಭೂ ಸಂಧಾರಣೆಯ ಗೇಣಿದಾರರಿಗೆ ಖಾತೆಗಳನ್ನು ಮಾಡಿಸುವ ಬಗ್ಗೆ.

೮೦೫. ಶ್ರೀ ಆರ್. ವೆಂಕಟರಾಮಯ್ಯ (ಮಾಗಡಿ).—ಮಾನ್ಯ ಕಂದಾಯ ಹಾಗೂ ಯೋಜನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಭೂ ಸಂಧಾರಣೆ ರೀತ್ಯ ಎಷ್ಟು ಜನ ಗೇಣಿದಾರರಿಗೆ ಜಮೀನು ಲಭ್ಯವಾಗಿದೆ.

ಆ) ಅವರುಗಳಿಗೆ ಅವರವರ ಹೆಸರಿಗೆ ಖಾತೆಗಳಾಗಿವೆಯೇ,

ಇ) ಭೂ ಮಾಲೀಕರಿಗೆ ಕೊಡಬೇಕಾದ ಪರಿಹಾರವೆಷ್ಟು ಹಾಗೂ ಅದನ್ನು ಈಗಾಗಲೇ ಕೊಡಲಾಗಿದೆಯೇ,

ಈ) ಜಮೀನಿನ ಮಾಲೀಕರಿಗೆ ಪರಿಹಾರ ಕೊಡಲು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಮಾಡಿರುವ ಸಾಲಗಳನ್ನು ವಸೂಲಾತಿ ಮಾಡಲು ಸರ್ಕಾರದ ಸಿದ್ಧವಾಗಿಲ್ಲವೆ, ಜಾಗ್ರತೆ ಮಾಡಿದರೆ ಬ್ಯಾಂಕಿನವರಿಂದ ರೈತರಿಗೆ ಆಗುವ ತಗಾದೆ ತಪ್ಪುವುದಿಲ್ಲವೆ,

ಉ) ಖಾತೆಗಳನ್ನು ಮಾಡದೇ ಇರುವ ಬಗ್ಗೆ ಏಕೆ ಪರಿಶೀಲಿಸಬಾರದು ಹಾಗೂ ವಿಳಂಬನೀತಿಗೆ ಕಾರಣವೇನು ?

ಶ್ರೀ ಎಸ್.ಆರ್ ಬೊಮ್ಮಾಯಿ(ಮಾನ್ಯ ಕಂದಾಯ ಮಂತ್ರಿಗಳು).-

ಅ) ೪,೮೫,೧೨೦

ಆ) ೪,೭೨,೫೭೨

ಇ) ೧೧೪ ಕೋಟಿ

೪೪,೭೧,೧೭,೭೫೨ (ನೀಡಲಾಗಿದೆ)

ಈ) ಇಲ್ಲ.

ಉ) ಕಡತಗಳನ್ನು ತಯಾರಿಸಲು ಆದೇಶ ನೀಡಲಾಗಿದೆ.

ರಾಜ್ಯದಲ್ಲಿರುವ ದೇವಾಲಯಂಗಳು.

೧೦೪೭. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಮಂಜರಾಯಿ ಮತ್ತು ಮೈನರ್ ಮುಜರಾಯಿ ದೇವಾಲಯಂಗಳಿವೆ ?

ಆ) ಅವುಗಳ ಜೀರ್ಣೋದ್ಧಾರಕ್ಕಾಗಿ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ? ಹಾಗೂ ಎಷ್ಟು ದೇವಾಲಯಂಗಳ ದುರಸ್ತಿಗಾಗಿ ಖರ್ಚಾಗಿರುವ ಹಣ ಎಷ್ಟು ?

ಇ) ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಮುಜರಾಯಿ ಹಾಗೂ ಮೈನರ್ ಮುಜರಾಯಿ ದೇವಾಲಯಗಳಿವೆ ? ಅವುಗಳ ಸ್ಥಿರ ಆಸ್ತಿಗಳೆಷ್ಟು ? ಈ ದೇವಾಲಯದ ಹೆಸರಿನಲ್ಲಿ ಶೇಖರವಾಗಿರುವ ಹಣ ಎಷ್ಟು ? ಇವುಗಳಲ್ಲಿ ಚಿನ್ನ ಬೆಳ್ಳಿ ಆಭರಣಗಳ ಬೆಲೆ ಎಷ್ಟು ?

ಶ್ರೀ ಎಸ್.ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—

ಅ) ರಾಜ್ಯದಲ್ಲಿ ಒಟ್ಟು ೩೬,೫೫೫ ಮುಜರಾಯಿ ಸಂಸ್ಥೆಗಳಿದ್ದು ಅವುಗಳಲ್ಲಿ ೩,೬೫೯ ಮೈನರ್ ಮಂಜರಾಯಿ ಸಂಸ್ಥೆಗಳಾಗಿವೆ.